SC No.54/2018
CW-01 / PW-11

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 54/2018

ಚಾ.ಸಾಃ 01 ಪ್ರಾ.ಸಾಃ 11

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 30.08.2025

| | | |
|---|---|---|
| ಸಾಕ್ಷಿಯ ಹೆಸರು | : | ವಿರೇಶ |
| ತಂದೆಯ ಹೆಸರು | : | ಹುಲಿಗೆಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಅಡವಿಖಾನಾಪೂರ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

(ಕಲಂ 299 ಸಿ.ಆರ್.ಪಿ.ಸಿ ರಡಿಯಲ್ಲಿ)

ಮೃತ ಸರಸ್ವತಿ ನನ್ನ ತಂಗಿ. ಆರೋಪಿ - ಭೀಮೇಶ ಈತನು ಮೃತ ಸರಸ್ವತಿಯ ಗಂಡ. ಚಾಸಾ.12 - ಹುಲಿಗೆಪ್ಪ ನನ್ನ ತಂದೆ. ಚಾಸಾ.13 – ಈರಮ್ಮ ನನ್ನ ತಂಗಿ. ಚಾಸಾ.14 – ನರಸಿಂಹ ನನ್ನ ಅಣ್ಣ. ಚಾಸಾ.22 – ಮಾರೆಮ್ಮ ನನ್ನ ಹೆಂಡತಿ.

02. ನನ್ನ ತಂಗಿ ಮೃತ ಸರಸ್ವತಿ ಹಾಗೂ ಆರೋಪಿಯ ಮದುವೆಯಾದ ನಂತರ ಆರೋಪಿತನು ಒಂದು ವರ್ಷ ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಂಡನು. ಅವರಿಗೆ ಒಂದು ಮಗು ಇತ್ತು. ನಂತರ ಆರೋಪಿತನು ನನ್ನ ತಂಗಿಗೆ ಟಾರ್ಚರ್ ಕೊಡುತ್ತಿದ್ದನು, ಹೊಡೆಯುವುದು ಮತ್ತು ಬಡೆಯುವುದು ಮಾಡುತ್ತಿದನು. ಆರೋಪಿತನು ಮತ್ತೊಬ್ಬ ಮಹಿಳೆಯೊಂದಿಗೆ ಸಂಬಂಧ ಹೊಂದಿರುವುದಾಗಿ ನನ್ನ ತಂಗಿ ಹೇಳಿದಳು. ಆರೋಪಿ ತೊಂದರೆ ಕೊಡುತ್ತಿದ್ದ ಬಗ್ಗೆ ನನ್ನ ತಂಗಿ ನನ್ನ ಮನೆಗೆ ಬಂದಾಗ

ಹೇಳುತ್ತಿದ್ದಳು. ನಾವು ಆರೋಪಿತನಿಗೆ ಬುದ್ಧಿ ಹೇಳಿದೆವು. ಆರೋಪಿ ಈ ರೀತಿ ಮಾಡುವುದಿಲ್ಲ ಎಂದು ಹೇಳಿದನು. ನಂತರ ಆರೋಪಿ ಮತ್ತು ನನ್ನ ತಂಗಿ ಅವರ ಊರಿಗೆ ಹೋದ ಮೇಲೆ ಆರೋಪಿ ನನ್ನ ತಂಗಿಗೆ ಮತ್ತೆ ಕಿರುಕುಳ ಕೊಟ್ಟಿದ್ದಾನೆ.

03. ಈಗ 8 ವರ್ಷಗಳ ಹಿಂದೆ ಒಂದು ದಿನ ಆರೋಪಿತನು ಫೋನ್ ಮೂಲಕ ನನ್ನ ತಂಗಿ ಸರಸ್ವತಿ ಬಾವಿಯಲ್ಲಿ ಬಿದ್ದು ಮೃತಪಟ್ಟಿರುವುದಾಗಿ ತಿಳಿಸಿದನು. ನಾವು ಹೋದೆವು. ಶವವನ್ನು ನೋಡಿದೆವು. ಅಕ್ಕ-ಪಕ್ಕದವರಾದ ಸರೋಜಮ್ಮ (ಚಾಸಾ-10) ಇವರು ನಮಗೆ ತಿಳಿಸಿದ್ದೆನೆಂದರೆ ಹಿಂದಿನ ದಿನ ಮಧ್ಯಾಹ್ನ ಆರೋಪಿ ಮತ್ತು ಸರಸ್ವತಿ ಜಮೀನಿನಲ್ಲಿ ಜಗಳ ಮಾಡುತ್ತಿದ್ದರು ಮತ್ತು ಸದರಿ ಜಗಳವನ್ನು ಚಾಸಾ-10 ಅಲ್ಲಿಯೇ ಹೊಲದಲ್ಲಿ ಇದ್ದಾಗೆ ನೋಡಿದಳು. ಇದೇ ರೀತಿ ಮಾಡಿದರೆ ನಾನು ಸತ್ತು ಹೋಗುತ್ತೇನೆ ಎಂದು ಸರಸ್ವತಿ ಈಕೆಯೂ ಆರೋಪಿತನಿಗೆ ಹೇಳಿದಳು, ಆಗ ಆರೋಪಿ ಸಾಯಿ ಹೋಗು ಎಂದು ಹೇಳಿದನು. ಈ ರೀತಿ ಚಾಸಾ-10 ನಮಗೆ ತಿಳಿಸಿದಳು. ನಂತರ ನನ್ನ ತಂಗಿ ಸರಸ್ವತಿ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆರೋಪಿ ಟಾರ್ಚರ್ ಕೊಟ್ಟಿದ್ದರಿಂದ ನನ್ನ ತಂಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

04. ಈ ಬಗ್ಗೆ ನಾನು ಪೋಲಿಸರಿಗೆ ದೂರು ಕೊಟ್ಟಿದ್ದೆನೆ. ಸಾಕ್ಷಿಯು ನಿಪಿ.7 ರ ದೂರನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.7 ರಲ್ಲಿ ನಾನು ಹೆಬ್ಬೆಟ್ಟಿನ ಸಹಿ ಮಾಡಿದ್ದೆನೆ.

05. ಈಗ ಆರೋಪಿತನು ತಲೆಮರಿಸಿಕೊಂಡಿದ್ದಾನೆ, ಎಲ್ಲಿ ಇದ್ದಾನೆ ಎಂದು ಗೊತ್ತಿಲ್ಲ. ಆರೋಪಿ ಹೆಸರಿನಲ್ಲಿ ಯಾವುದೇ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ.

(ಆರೋಪಿತನು ತಲೆಮರಿಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು).

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.